ಬಾಗಲಕೋಟೆ ತಾಲ್ಲೂಕಿನ ಕಲಾಬಿ ಗ್ರಾಮದಲ್ಲಿ ಘಟಪ್ರಭಾ ನದಿಗೆ ಬ್ಯಾರೇಡು ಮಾಡಬೇಕೆಂಬ ಪ್ರಸ್ತಾವನೆ ಅನೇಕ ವರ್ಷಗಳಿಂದ ಸರ್ಕಾರದ ಮುಂದಿದ್ದರೂ, ಅರ್ಧ ಕೆಲಸ ಮಾತ್ರ ಮುಗಿದಿದೆ, ಅಧಿಕಾರಿಗಳು ಅಲಕ್ಷ್ಯ ಧೋರಣೆ ತಾಳಿ ಅದನ್ನು ಪೂರ್ತಿ ಮಾಡುತ್ತಿಲ್ಲ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತಿದ್ದೇನೆ; ಇದನ್ನೂ ಅಧಿಕಾರಿಗಳಿಗೆ ಸೂಕ್ತ ಆದೇಶ ಹೊರಡಿಸಿ ಕೆಲಸ ಮುಗಿಸಿಕೊಡಬೇಕಾಗಿ ಪ್ರಾರ್ಥನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಬಾಗಲಕೋಟೆಯದೂ ಸಹ ನಮ್ಮ ಗಮನದಲ್ಲಿದೆ. ಈಗಾಗಲೇ ಕೆಲಸಕಾರ್ಯಗಳನ್ನು ತಕ್ಷಣ ಮುಗಿಸಿ ಎಂದು ಇಂಜಿನಿಯರ್ಸ್‌ಗೆ ನಾವು ಡೈರೆಕ್ಷನ್ಸ್ ಕೊಟ್ಟಿದ್ದೇವೆ. ಅನುದಾನವೇನು ಸ್ವಲ್ಪ ಕಮ್ಮಿ ಬಿದ್ದಿದೆ ಅದನ್ನು ತಕ್ಷಣ ತೆಗೆದುಕೊಂಡು ಕೆಲಸ ಕಾರ್ಯಗಳನ್ನು ಮುಗಿಸುತ್ತೇವೆ.

ಸ್ವಯಂ ನಿವೃತ್ತಿ ಹೊಂದಿದ ಐ.ಎ.ಎಸ್. ಅಧಿಕಾರಿ ಮತ್ತು ಸೇವೆಗೆ ಅರ್ಜಿ ಸಲ್ಲಿಸಿರುವುದು.

358 (3277) ಶ್ರೀ ಎ. ರಾಮದಾಸ್ (ಕೃಷ್ಣ ರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಹಿರಿಯ ಐ.ಎ.ಎಸ್. ಅಧಿಕಾರಿಗಳು ಸ್ವಯಂ ನಿವೃತ್ತಿ ಹೊಂದಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲನ್ನು ಅನುಭವಿಸಿದ ನಂತರ ಸರ್ಕಾರಿ ಸೇವೆಗೆ ಪುನರ್ ಸೇರ್ಪಡೆ ಯಾಗಲು ಅರ್ಜಿಯನ್ನು ನೀಡಿದ್ದಾರೆಯೇ?

ಆ) ಹಾಗಿದ್ದಲ್ಲಿ ಅಂತಹ ಅಧಿಕಾರಿಯ ಹೆಸರೇನು;

ಇ) ಅರ್ಜಿಯ ಬಗ್ಗೆ ಸರ್ಕಾರದ ಕೈಗೊಂಡಿರುವ ಕ್ರಮಗಳೇನು?

ಈ) ಈ ರೀತಿ ಪುನರ್‌ನೇಮಕಕ್ಕೆ ನಿಯಮಾವಳಿಯಲ್ಲಿ ಅವಕಾಶವಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಯಾವ ಐ.ಎ.ಎಸ್. ಅಧಿಕಾರಿಯೂ ಚುನಾವಣೆಯಲ್ಲಿ ಸ್ವಧೀಸುವ ಸಲುವಾಗಿ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿರಲಿಲ್ಲ. ಆದರೆ ಒರ್ವ ಅಧಿಕಾರಿ ಐ.ಎಸ.ಎಸ್.ಗೆ ರಾಜೀನಾಮೆ ಸಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸಿ ಅಲ್ಲಿ ಸೋಲನ್ನು ಅನುಭವಿಸಿದ ನಂತರ ಸರ್ಕಾರಿ ಸೇವೆಗೆ ಪುನರ್ ಸೇರ್ಪಡೆಯಾಗಲು ಅರ್ಜಿ ಸಲ್ಲಿಸಿದ್ದರು.

ಆ) ಶ್ರೀ ಜೇಸುದಾಸ್ ಸೀಲಂರವರು ರಾಜೀನಾಮೆ ಸಲ್ಲಿಸಿರುತ್ತಾರೆ.

ಇ) ಅವರ ಅರ್ಜಿಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿ, ಕೇಂದ್ರ ಸರ್ಕಾರವು ಅವರ ಅರ್ಜಿಯನ್ನು ತಿರಸ್ಕರಿಸಿದೆ.

ಈ) ರಾಜೀನಾಮೆಗಾಗಿ ಅರ್ಜಿ ಸಲ್ಲಿಸಿದ ಅಧಿಕಾರಿಯು 90 ದಿನಗಳ ಒಳಗಾಗಿ ಅಂತಹ ಅರ್ಜಿಯನ್ನು ಹಿಂದಕ್ಕೆ ಪಡೆಯಲು ಸೆಂಟ್ರಲ್ ಸಿವಿಲ್ ಸರ್ವಿಸಸ್ (ಪೆನ್ಸನ್) ನಿಯಮಾಗಳ ಮೇರೆಗೆ ಕೆಲವೊಂದು ನಿಭಂದನೆಗಳಿಗೆ ಒಳಪಟ್ಟು ಅವಕಾಶವಿದೆ.

ಶ್ರೀ ಎ ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ಈ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿಲ್ಲ ಅಂತ ಹೇಳಿದ್ದಾರೆ. ಹಾಗಾದರೆ ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದರು ಎಂಬುದು ಮೊದಲನೆಯ ಪ್ರಶ್ನೆ. ಹಾಗೆಯೇ ರಾಜೀನಾಮೆ ಅಕ್ಸೆಪ್ಟ್ ಆಗಿತ್ತೇ ಎನ್ನುವುದು ಎರಡನೇಯ ಪ್ರಶ್ನೆ. ನನ್ನ ಮೂರನೇ ಪ್ರಶ್ನೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಸರ್ಕಾರ ಕೇಂದ್ರ ಸರ್ಕಾರಕ್ಕೆ ಅವರ ಅರ್ಜಿ ಕಳುಹಿಸಿದ್ದೇವೆ ಎಂದು ಹೇಳಿದೆ. ಆದರೆ ತಮ್ಮ ಶಿಫಾರಸ್ ಏನಾಗಿತ್ತು ಎಂದು ಹೇಳಲಿಲ್ಲ. ಮತ್ತು ಕೊನೆಯ ಪ್ರಶ್ನೆಗೆ ಉತ್ತರ ಕೊಡುವಾಗ 90 ದಿವಸದೊಳಗೆ ರಾಜೀನಾಮೆಯನ್ನು ಹಿಂದಕ್ಕೆ ಪಡೆಯಬಹುದೆಂದು ಹೇಳಿದ್ದೀರಿ. ಆದರೆ ಕೆಸಿಎಸ್ ಆರ್ ನಡತೆ ನಿಯಮದ ಪ್ರಕಾರ ಅಂದರೆ 1996ರ ನಿಯಮ 5(1) ಮತ್ತು 4ರ ನಿಯಮದ ವಿರುದ್ಧವಾಗಿ ನಡೆದುಕೊಂಡಿರುವುದು ನಿಜವೇ ಅಂತ ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಉತ್ತರಗಳೆಲ್ಲವನ್ನೂ ಒದಗಿಸಿ ಕೊಟ್ಟಿದ್ದೇವೆ; ಅಧಿಕಾರಿ ಹೆಸರು ಹೇಳಿದ್ದೇವೆ. ಅವರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿರಲಿಲ್ಲವೆಂಬ ಫ್ಯಾಕ್ಚುವಲ್ ಸ್ಟೇಟ್‌ಮೆಂಟ್ ಸಹ ಹೇಳಿದ್ದೇವೆ. ಅವರು ಚುನಾವಣೆಗೆ ಸ್ಪರ್ಧಿಸಿದ್ದರು ಎನ್ನುವುದನ್ನು ಕೂಡ ಒಪ್ಪಿಕೊಂಡಿದ್ದೇವೆ. ಚುನಾವಣೆಯಲ್ಲಿ ಸೋತರು ಎಂಬ ಫ್ಯಾಕ್ಚುವಲ್ ಸ್ಟೇಟ್‌ಮೆಂಟ್ ಹೇಳಿದ್ದೇವೆ. 90 ದಿವಸದೊಳಗೆ ಅಂತಹ ಅರ್ಜಿ ಹಿಂದಕ್ಕೆ ಪಡೆಯಲು ಸೆಂಟ್ರಲ್ ಸಿವಿಲ್ ಸರ್ವೀಸಸ್ ನಿಯಮದಲ್ಲಿ ಅವಕಾಶವಿದೆ ಆ ಪ್ರಕಾರ ಅವರು ಅರ್ಜಿ ಸಲ್ಲಿಸಿದ್ದರು. ಅದನ್ನು ನಾನು ಶಿಫಾರಸ್ಸು ಮಾಡಿ ಕಳಿಸಿದೆ ಆದರೆ ಅದನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳಲಿಲ್ಲ. There are all the information for which you are entitiled to.

ಶ್ರೀ ಎ. ರಾಮದಾಸ್ : ಅಂದರೆ ರಾಜೀನಾಮೆಯನ್ನು ಆ ಕಾರಣಕ್ಕೋಸ್ಕರ ಸಲ್ಲಿಸದೇ ಒಂದು ರಾಜಕೀಯ ಪಕ್ಷದಿಂದ ಚುನಾವಣೆಗ ಸ್ಪರ್ಧಿಸಿದ ನಂತರದಲ್ಲಿ ತಮ್ಮ ಕೆಸಿಎಸ್‌ಆರ್ ನಿಯಮಗಳ ಪ್ರಕಾರವೇ ಸೆಕ್ಷನ್ 5 ರ ಕೆಳಗೆ ಅವರು ಯಾವುದಾದರೂ ಪಾರ್ಟಿಯಿಂದ ಚುನಾವಣೆಗೆ ನಿಂತಿದ್ದಾಗಲೀ, ಅಥವಾ ಇನ್‌ವಾಲ್ವ್‌ಮೆಂಟ್ ಇದ್ದದ್ದೇ ಆದಲ್ಲಿ ಸೇವಾನಿಯಮದಡಿ ಅದು ಬರುವುದರಿಂದ ಅವರನ್ನು ಮತ್ತೊಮ್ಮೆ ಸೇವೆಗೆ ತೆಗೆದುಕೊಳ್ಳಬಾರದೆಂಬ ನಿಯಮ ಇರುವುದರಿಂದ, ಆ ಸೆಕ್ಷನಿನ ವಿರುದ್ಧ ರಾಜ್ಯ ಸರ್ಕಾರ ಹೇಗೆ ಶಿಫಾರಸ್ಸು ಮಾಡಿತು?

ಶ್ರೀ ಎಸ್.ಎಂ. ಕೃಷ್ಣ : ಅವರು ಸಲ್ಲಿಸಿದ್ದ ರಾಜೀನಾಮೆಯನ್ನು ಅಂಗೀಕರಿಸುವಂತೆ ನಮ್ಮನ್ನು ಕೋರಿದ್ದರು, ಅದನ್ನು ಅಂಗೀಕರಿಸಲು ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆವು. ಅನಂತರ ನಾವು ವಾಪಸ್ ಬರುತ್ತೇವೆ ಅಂತ ಹೇಳಿದರು, ಆಗ ಸೆಂಟ್ರಲ್ ಸಿವಿಲ್ ಸರ್ವೀಸಸ್ ಕೋಡ್ ನೋಡಿದೆವು, ಅದರಲ್ಲಿ ಅದಕ್ಕೆ ಯಾವ ಪ್ರತಿಬಂಧಕವೂ ಇರಲಿಲ್ಲ, ನಿರ್ಬಂಧವೂ ಇರಲಿಲ್ಲ ನಿಷೇಧವೂ ಇರಲಿಲ್ಲ ಆದ್ದರಿಂದ ನಮ್ಮ ಡಿಸ್ಕ್ರಿಶನ್ ಉಪಯೋಗಿಸಿ ನಾವು ಶಿಫಾರಸ್ಸು ಮಾಡಿದೆವು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಇದು ನನಗೆ ಕ್ಲಾರಿಫೈ ಆಗಲಿಲ್ಲ. ಕೆಸಿಎಸ್‌ಆರ್‌ನ ಸೆಕ್ಷನ್ 5, 1 ಮತ್ತು 4 ರ ರೀತ್ಯ ಯಾವುದೇ ಸರ್ಕಾರಿ ಅಧಿಕಾರಿ ರಾಜಕೀಯ ಪಕ್ಷದಲ್ಲಿ ಅಥವಾ ಚುನಾವಣೆಯಲ್ಲಿ ಇನ್‌ವಾಲ್ವ್ ಆಗಿದ್ದೇ ಆದರೆ ಅವರ ಮೇಲೆ ಕ್ರಮ ಜರುಗಿಸಿ ಯಾವುದೇ ಕಾರಣಕ್ಕೂ ಅವರನ್ನು ಮತ್ತೆ ಸರ್ವೀಸಿಗೆ ತೆಗೆದುಕೊಳ್ಳಬಾರದೆಂದಿದೆ. ಹಾಗಾದರೆ ಕೆಸಿಎಸ್‌ಆರ್ ವಿರುದ್ಧವಾಗಿ ಶ್ರೀ ಜೇಸುದಾಸ್ ಶೀಲಂ ಅವರನ್ನು ನೇಮಕ ಮಾಡಲು ಶಿಫಾರಸ್ಸು ಏಕೆ ಮಾಡಿದರು ಅಂತ ನನ್ನ ಪ್ರಶ್ನೆ.

ಶ್ರೀ ಎಸ್‌ಎಂ ಕೃಷ್ಣ : ನಾವು ಅವರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಶಿಫಾರಸ್ಸು ಮಾಡಿದೆವು.

ಶ್ರೀ ಎನ್ ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾಳೆ ಇಂಥದ್ದೇ ಅಧಿಕಾರಿಗಳು ಮುಂದೆ ಬಂದಲ್ಲಿ ಚುನಾವಣೆಗೆ ನಿಲ್ಲಲು ಅವರಿಗೆ ಅಲೋ ಮಾಡುತ್ತೀರಾ?

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಅಂದರೆ ಸರ್ಕಾರಿ ಅಧಿಕಾರಿಗಳಿಗೆ ಈ ಸದನದ ಮೂಲಕ ನಾವು ಒಂದು ಮೆಸೇಜ್ ಕಳಿಸುತ್ತಿದ್ದೇವೆ ಎಂದು ಹೇಳಿದ ಹಾಗಾಯಿತು. ಅದರೆ ಯಾರು ಆಡಳಿತ ಪಕ್ಷದಲ್ಲಿದ್ದಾರೆ ಅವರಿಗೆ ಸ್ಪರ್ಧಿಸಲು ಅವಕಾಶ ಕೊಡುತ್ತೇವೆ ಎಂಬ ಮೆಸೇಜಾ ಇದು? ಈ ರೀತಿ ರಾಂಗ್ ಮೆಸೇಜ್ ರಾಜ್ಯಕ್ಕೆ ರಾಜ್ಯದ ಜನತೆಗೆ ಇಲ್ಲಿಂದ ಹೋಗಬಾರದು.

ಶ್ರೀ ಎಸ್.ಎಂ. ಕೃಷ್ಣ : ಅಖಿಲ ಭಾರತ ಸೇವಾ ನಿಯಮಗಳ ಪ್ರಕಾರ ಯಾವ ನಿಷೇಧವೂ ಇಲ್ಲದೇ ಇದ್ದುದರಿಂದ ಸರ್ಕಾರ ತನ್ನ ಡಿಸ್ಕ್ರಿಶನ್ ಉಪಯೋಗಿಸಿ ಈ ಶಿಫಾರಸ್ಸನ್ನು ಮಾಡಿತು. ಅನಂತರ ಈ ಬಗ್ಗೆ ಕೇಂದ್ರ ಸರ್ಕಾರ ಏನು ತೀರ್ಮಾನ ಮಾಡಿದೆಯೋ ಅದು ಎಲ್ಲರ ಮೇಲೂ ಬದ್ಧವಾಗಿದೆ. ಅಲ್ಲಿಗೆ ಈ ಪ್ರಕರಣ ಮುಗಿಯಿತು.

ಚನ್ನಗಿರಿ ತಾಲ್ಲೂಕಿನಲ್ಲಿ ಹಸಿರು ಮತ್ತು ಹಳದಿ ಕಾರ್ಡುಗಳನ್ನು ಹೊಂದಿರುವವರ ಕುರಿತು

360 (3384) ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಗಿರಿ ತಾಲ್ಲೂಕಿನಲ್ಲಿ ಹಸಿರು ಕಾರ್ಡುಮತ್ತು ಹಳದಿ ಕಾರ್ಡುಗಳ ವ್ಯಾಪ್ತಿಗೆ ಬರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು; (ಪ್ರತ್ಯೇಕ ವಿವರ ನೀಡುವಿರಾ):

ಆ) ಚನ್ನಗಿರಿ ತಾಲ್ಲೂಕಿನಲ್ಲಿ ವಿತರಣೆ ಮಾಡಿದ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು;

ಇ) ಹಸಿರು ಕಾರ್ಡು ನೀಡದೇ ಇರುವ ಕುಟುಂಬಗಳ ಸಂಖ್ಯೆ ಎಷ್ಟು;

ಈ) ಹಸಿರು ಕಾರ್ಡು ವಿತರಿಸದೇ ಇರುವ ಕುಟುಂಬಗಳಿಗೆ ಎಂದು ವಿತರಿಸಲಾಗುವುದು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಜನಗಣತಿ ಅಂಕಿ ಅಂಶಗಳ ಆಧಾರದಂತೆ ಚನ್ನಗಿರಿ ತಾಲ್ಲೂಕಿನಲ್ಲಿ 1991ನೇ ಇಸವಿಯಲ್ಲಿದ್ದ ಕುಟುಂಬಗಳ ಸಂಖ್ಯೆ 43485 ಹಾಗೂ 1999ಕ್ಕೆ ಅಂದಾಜು ಕುಟುಂಬಗಳ ಸಂಖ್ಯೆ: 55226 (ಪ್ರೊಜೆಕ್ಟೆಡ್). ಆದರೆ ಈ ಕುಟುಂಬಗಳಲ್ಲಿ ಎಷ್ಟು ಕುಟುಂಬಗಳು ಹಸಿರು ಪಡಿತರ ಚೀಟಿ ವ್ಯಾಪ್ತಿಗೆ ಹಾಗೂ ಕೇಸರಿ ಪಡಿತರ ಚೀಟಿ ವ್ಯಾಪ್ತಿಗೆ ಬರುವರೆಂಬ ಬಗ್ಗೆ ಸಮೀಕ್ಷೆ ನಡೆಸಿ ಗುರುತಿಸಿಲ್ಲಾ. ಈವರೆಗೆ ನೀಡಲಾದ ಹಸಿರು ಮತ್ತು ಹಳದಿ ಕಾರ್ಡುಗಳ ವಿವರಗಳು ಕೆಳಗಿನಂತಿದೆ:

ಹಸಿರು ಕಾರ್ಡುಗಳ ಕುಟುಂಬಗಳು	41025
ಹಳದಿ ಕಾರ್ಡುಗಳ ಕುಟುಂಬಗಳು	19818